ಜನ್ಮಾ ॥ ೧೦ ॥ ಭೂಗೋಲಸಯ್ಯನ ಪುಣ್ಯಾದಿಂದಮ್ಮಾ । ಭೋಗ ಮಂದಿರವೂ ಬ್ಯಾಸರಿಕ್ಹುಟ್ಟಿತಮ್ಮಾ ॥ ಆಗಲಿನ್ನೊಮ್ಮೆ ನೀ ಹೋಗಿ ಬಾರಮ್ಮಾ । ಮನೋ । ರೋಗಾ ಬಿಡಿಸೆನ್ನಾ ನೀ ಕಾಯಿದುಕೊಳ್ಳಮ್ಮಾ ॥ ೧೧ ॥ ಮಾತು ಸೈರಿಸದೊಂದು ರೀತಿತಿಳಿಯದೆ । ಕಾ । ಮಾತುರದಲ್ಲಿ ಮನ ಕಂಗೆಡುತಿಹುದೆ । ಯಾತರ ಬದುಕಮ್ಮಾ ಎಲ್ಲಿಯಾಧರ್ಮಾ । ಶ್ರೀ । ನಾಥಗೇನೆನಲಮ್ಮಾ । ಇದು ನನ್ನ ಕರ್ಮಾ ॥ ೧೨ ॥ ದೂತಿ ಶ್ರೀಕೃಷ್ಣಾ ನಿಜನಾಥ ನನಗಮ್ಮಾ ಆತೂರಕಾಗದ್ದು ಆಶ್ಚರ್ಯವಮ್ಮಾ ॥ ಸೋತುಬಾಹದಕೆ ಫಲಕಾಲ ಬೇಕಮ್ಮಾ । ಆತ ಗೋಪಾಲಾ ವಂಚನೆಗಾರನಮ್ಮಾ ॥ ೧೩ ॥ ಶ್ರೀಃ ॥

## ರಾಗ ಭೈರವಿ, ಆದಿತಾಳ.

ಸಾವಮಾದಿಂದಲವನಾ ಪ್ರೇಮಾ ಸಂಪಾದಿಸೆ ಕಂಡ । ಕಾಮಿನಿಯರ ಮಾತಿಗೆ ಕಲಕದೀರಮ್ಮಾ ॥ ಪಲ್ಲ ॥ ರಚ್ಚೆವಳ್ಳಿದಲ್ಲೆ ಅವಗೆ । ಮತ್ಸರ ಹುಟ್ಟೋದೇ । ಮುಚ್ಚುಮರೆಯೆಂಬೋದು ಬಹಳ್ಹೆಚ್ಚು ಕಾಣಿಸೋದೆ । ಮಚ್ಚುನುಂಗಾವಾರೆ ಅವನಾ । ಇಚ್ಛೆ ನಿನ್ನಾ ಮೇಲೆ । ಕುಚ್ಛಿತಬುದ್ಧಿಯು ನಿನಗೆ । ಕಲಿಸುವಾರು ಬಹಳ ॥ ೧ ॥ ಗಂಡುಸಲ್ಲಾವೇನೆ ಮಾ । ರ್ಕೊಂಡಾವಾಳು ನೀನೆ ಭೂ । ಮಂಡಲನಾಳೂವಗ್ಯಾಕೆ ನಿನ್ನ ಮುಗುದಾಣೆ ॥ ಅಂಡೊಲಿದು ಆಪ್ತರೊಳು । ಭಂಡಾಳಾಗಾದೀರೆ ನಿನ್ನ । ಮುಂಡೆ ಕುಕ್ಕಿ ಬೋಧಿಸುವ । ಮಿಂಡೆರೈದಾರೆ ॥ ೨ ॥ ಹಲವನಾಡಬೇಡ ಪ್ರೇಮ । ಕಲಹವೆಂದು ತಿಳಿಯೆ । ನಳಿನಮುಖಿ ನಿನ್ನ ಮನದ । ಛಲವನೆಲ್ಲಾ ಕಳಿಯೆ ॥ ಕುಲಸತಿ ನೀನುಂಟಾದರೆ । ಕುಶಲದಿಂದಲವನಾ । ವಲಿಮೆ ತಿಳಿದುವಾಗ್ಮಧುರದಿ । ಕೂಡೆ ನೀ ಮಾಧವನಾ ॥ ೩ ॥ ಅಂದರೆ ನೀಯೆನ್ನ ಮೋರೆ । ಮುಂದಾಗಡಿಯಾಲನ್ನೆ । ಕಂದರ್ಪನಂಬಿಗೆ ಸಿಲ್ಕಿ । ಬಳಲಬ್ಯಾಡ ವಾಹೆಣ್ಣೆ । ಅಂದಾವಲ್ಲಾ ತವಕಾ । ಮನದೋಳಾಲಿಸಿ ಕೇಳಮ್ಮಾ । ನಂದಕುವರ ನಿನ್ನ ಮನದಾ । ನಯುವನೋಡ್ಯಾನಮ್ಮಾ ॥ ೪ ॥ ಸವತಿಯೆಂಬ ಶೂಲ ಸಲ್ಲದಮ್ಮಾದಾರಿಗನ್ನಾ । ಯುವತಿ ತಾಯಿ ತಂದೆ

ಮುಚ್ಚಿಸುತಿದ್ದನು ಕೊಳಲೂದಿ ॥ ಕೋಲು ॥ ೬ ॥ ಫಣೆಯುಳ್ಳ ರುಳಿ ಲೆಯೂ । ಪಾದದಿ । ಝಣರೆಂಬಂದಿಗೆಯೂ । ಕುಣಿದಾಡುವ ಗೆಜ್ಜೆ ಘಿಲ್ಲು ಘಿಲುಕೆನುತಲಿ ॥ ಕೋಲು ॥ ಎಣೆಯಿಲ್ಲದ ಚಲುವಾ । ಮಾಣಿಕ । ಮಣಿ ಯುಂದದಿ ಹೊಳವಾ ॥ ಹವಣಗಾರ್ತಿಯರೊಳ್ಳಗಲಿರಳಾಡುವ ॥ ಕೋಲು ॥ ೭ ॥ ಕಾಳಿಂದಿಯ ಧುಮುಕಿ । ಕಾಳಾಹಿಫಣಿ । ತುಳಿದು । ತಾಳ ಗತಿಯ ನಟನಾಟ್ಯವನಾಡಿದ ॥ ಕೋಲು ॥ ತೋಳದಂಡಿಗೆಯಾಡಿ । ಗೋ ಪಾಲಕರೊಡಗೂಡಿ । ಕೇಳಿಕೆವಾಡಿದ ಗೋಕುಲದೊಳಗೆ ॥ ಕೋಲು ॥ ॥ ೮ ॥ ಆಲಯಗಳ ಪೊಗುವಾ । ವಿಶಾಸಲ । ಹಾಲುಬೆಣ್ಣೆಯ ಕಳೆವಾ ಬಾಲೆಯರ್ಕಿಂದಟ್ಟಲು ಸಿಗದೋಡುವ ॥ ಕೋಲು ॥ ಪಾಳತಿಯಲಿ ಬರುವಾ । ಕರುಗಳ । ಕಣ್ಣಿಗಳನೆ ಬಿಡುವಾ ॥ ಬಾಲಕರನು ಬಡಿದೋಡುವ ಕಾಡುವ ॥ ಕೋಲು ॥ ೯ ॥ ಶೀರೆಯ ಶೆಳದ್ಯೊವಾ । ಯಮುನಾ । ತೀರದ ಕದವೇರ್ವ । ನಾರಿಯರೆಲ್ಲರ ಬತ್ತಲೆಮಾಡುವ ॥ ಕೋಲು ॥ ವಿಷಾರಿದವಾಸವನಾ । ವರುಷದ । ಹಾರವ ಬಳಿದುಂಡಾಸಂತ । ಧಾರಿಗೆ ಗಿರಿಕೊಡೆಮಾಡಿದ ॥ ಕೋಲು ॥ ೧೦ ॥ ಬಿಲ್ಲುಹಬ್ಬಕೆ ಹೋಗಿ । ಮಲ್ಲರ । ಹಲ್ಲುಮುರಿದುನೀಗಿ । ಬಲ್ಲಿದ ಕಂಸನ ಮುರಿದಿಟ್ಟಾ ॥ ಕೋಲು ॥ ಉಲ್ಲಾ ಸದಿ ಹೆತ್ತಾ । ತಾಯಿಯುಕಡೆ । ಯಿಲ್ಲದೆ ಬಿಡಿಸೀ । ಸಲ್ಲಿಸಿ ಮುತ್ಯಗೆ ಪಟ್ಟವ ಗಟ್ಟಿದ ॥ ಕೋಲು ॥ ೧೧ ॥ ದ್ವಾರಕಿಯಲಿ ಬಂದೂ । ಹೆಂಡರನಾಯಿದು ಮದುವ್ಯಾದಾ । ವಾರಿಜನಾಭನ ವಾರ್ತೆಯ ಕೇಳಿದೆ ॥ ಕೋಲು ॥ ದೂರದಿಂದ ಬಂದೆ । ಶೌರಿಯ । ನಾರಿಯಳನು ಕಂಡೆ ॥ ವಿಶಾರಿದಪರಿತೋ ಷದಿ ನಲಿದಾಡಿದೆ ॥ ಕೋಲುಕೋಲೆನ್ನಾ । ಮುತ್ತಿನ । ಕೋಲುಕೋ ಲೆನ್ನಾ ॥ ೧೨ ॥ ಶ್ರೀ ॥

ರಾಗ ಶಂಕರಾಭರಣ, ಆದಿತಾಳ.

ಬಂದಳೊಲದಿನಲಿ ಬಾಗಿಲೊಳಗಾ । ನಂದದಿಂದಲಿ ಹಾಡುತಾ । ಸುಂದರಾಂಗಳಿ ಅರ । ವಿಂದಾಗಂಗಾಳಿ ಮುದ್ದು । ಮಂಗಳಪದದಿಂದ ಅಂಗ ಳವನೆ ಪೊಕ್ಕು ॥ ಪಲ್ಲ ॥ ಸೊಲ್ಲುಸೊಲ್ಲಿಗೆ ನಗುತಾ । ಚಲ್ವ । ಮಲ್ಲಿಗೆ ಝಳ್ಳೀ ಬೆನ್ನಲಿ ವಲಿವುತಾ ॥ ಚಲ್ವಾಧರದ ಬೆಳಗಾಬೆರಳ ತುದಿ । ಯಲ್ಲಿ

